# ಯಾರು ದೇವಿ ಭಗವತಿಯೋ, ಅವರೇ ಶಾರದಾ, ಸರಸ್ವತಿ

ಸ್ವಾಮಿ ಚೇತನಾನಂದ

(೨೦೦೬ನೇ ಡಿಸೆಂಬರ್ ಸಂಚಿಕೆಯಿಂದ ಮುಂದುವರಿದುದು)



**ಯಾ ದೇವೀ ಸರ್ವಭೂತೇಷು**
**ಶಾಂತಿರೂಪೇಣ ಸಂಸ್ಥಿತಾ:**

ಶಾಂತಿಯ ಪರಿಧಿಯಲ್ಲಿ ಶಮ, ಉಪಶಮ, ನಿವೃತ್ತಿ, ಮೋಕ್ಷ, ಕೈವಲ್ಯ, ನಿರ್ವಾಣ ಇತ್ಯಾದಿಗಳೆಲ್ಲ ಸೇರಿಕೊಳ್ಳುತ್ತವೆ. ಜೀವಿಗೆ ವಿಷಯ ಭೋಗಗಳ ಇಚ್ಛೆ ಇರುವವರೆವಿಗೆ ಶಾಂತಿಯು ಲಭಿಸುವುದಿಲ್ಲ, ಕೇವಲ ಭೋಗೇಚ್ಛೆ ವೃದ್ಧಿಯಾಗುತ್ತಲೇ ಹೋಗುವುದು. ಶಾಂತಿ ಇರುವುದು ಅಂತರಂಗದಲ್ಲಿ, ಬಹಿರಂಗದಲ್ಲಲ್ಲ. ಶಾಂತಿಸ್ವರೂಪಿಣಿಯಾದ ಶಾರದಾದೇವಿಯವರ ಬಳಿ ಭಕ್ತರು ಬಂದು ಶಾಂತಿ ಇಲ್ಲ ಎಂದಾಗ ಅವರು ಹೇಳುತ್ತಿದ್ದರು, "ನೀವುಗಳು ಪ್ರಾತಃಕಾಲ ಮೂರು ಗಂಟೆಗೇ ಎದ್ದು ಸ್ಥಿರವಾಗಿ ಕುಳಿತು, ಜಪಮಾಡಿ ನೋಡಿ, ನಿಮಗೆ ಶಾಂತಿ ಲಭಿಸುವುದಿಲ್ಲವೇ ಎಂದು. ಅದೊಂದೂ ಮಾಡುವುದಿಲ್ಲ. ಸುಮ್ಮನೆ ಅಶಾಂತಿ, ಅಶಾಂತಿ ಎನ್ನುವಿರಿ. ಎಂತಹ ಅಶಾಂತಿ ನಿಮಗೆ? ನನಗಾದರೋ ಅಶಾಂತಿ ಏನೂ ಅಂತಲೇ ತಿಳಿದಿರಲಿಲ್ಲ. ಸಂಸಾರದಲ್ಲಿದ್ದ ಮೇಲೆ ಸುಖ, ದುಃಖಗಳು ಇದ್ದೇ ಇರುತ್ತವೆ. ಒಬ್ಬೊಬ್ಬರಿಗೂ ಅನುಭವಿಸುವ ಕಾಲ ಬಂದಾಗ ಅದನ್ನು ಅನುಭವಿಸಲೇಬೇಕು. ಮನಸ್ಸಿನಲ್ಲಿ ಇದನ್ನೆಲ್ಲಾ ಎದುರಿಸುವ ಧೈರ್ಯ ಸ್ಥೈರ್ಯಗಳಿರಬೇಕು ಮತ್ತು ಮನಸ್ಸು ಸದಾ ಭಗವಂತನಲ್ಲಿ ನೆಲೆಸಿರಬೇಕು. ಅಲ್ಲದೆ ಸುಮ್ಮ ಸುಮ್ಮನೆ ಅಶಾಂತಿ ಎನ್ನುವುದು ಸರಿಯಲ್ಲ."

ಈ ಜಗತ್ತಿನಲ್ಲಿ ಶಾಂತಿ, ಆನಂದಗಳು ಕ್ರಯಕ್ಕೆ ಸಿಗುವಂತಹವಲ್ಲ. ಶ್ರೀಮಾತೆ ಮರ್ತ್ಯಲೋಕದಿಂದ ವಿರಮಿಸುವ ಮೊದಲು ಸಕಲರಿಗೂ ತಮ್ಮ ಅಂತಿಮ ಅಭಯವಾಣಿಯನ್ನು ನೀಡಿ ಹೋಗಿರುವರು, "ಮಗು, ನಿನಗೆ ಶಾಂತಿ ಬೇಕಿದ್ದಲ್ಲಿ, ಇತರರ ಲೋಪದೋಷಗಳನ್ನು ನೋಡದೆ, ಬದಲಾಗಿ ನಿನ್ನ ಸ್ವಂತ ದೋಷಗಳನ್ನು ನೋಡು. ಈ ಜಗತ್ತಿನಲ್ಲಿ ಅನ್ಯರಾರೂ ಇಲ್ಲ. ಎಲ್ಲರನ್ನೂ ನಿನ್ನವರು ಎಂದು ತಿಳಿ" ಎಂದು.

**ಯಾ ದೇವೀ ಸರ್ವಭೂತೇಷು**
**ಶ್ರದ್ಧಾರೂಪೇಣ ಸಂಸ್ಥಿತಾ :**

ಶ್ರದ್ಧಾ ಎಂದರೆ ಅಚಲವಾದ ವಿಶ್ವಾಸ, ಆಸ್ತಿಕ್ಯಬುದ್ಧಿ. ಭಗವದ್ಗೀತೆಯಲ್ಲಿ ಹೇಳಿದೆ: **ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ** "ಪುರುಷನು ಶ್ರದ್ಧಾಮಯನು; ಯಾವನು ಯಾವ ಶ್ರದ್ಧೆಯುಳ್ಳವನೋ ಅವನು ಆ ಶ್ರದ್ಧೆಗೆ ಅನುರೂಪನಾಗುತ್ತಾನೆ." ಯಾವುದು ನಿತ್ಯವೋ, ಸತ್ಯದಿಂದ ಚ್ಯುತಿಯಾಗದೇ ಇರುವುದೋ ಅಂತಹ ವಿಶ್ವಾಸವೇ ಶ್ರದ್ಧೆ. ಶಾಸ್ತ್ರಗಳಲ್ಲಿ ಮತ್ತು ಗುರುವಿನ ವಾಕ್ಯಗಳಲ್ಲಿನ ವಿಶ್ವಾಸವನ್ನೂ ಶ್ರದ್ಧೆ ಎಂದು ಹೇಳುತ್ತೇವೆ. **ಶ್ರದ್ಧಾವಾನ್ ಲಭತೇ ಜ್ಞಾನಂ**—ಶ್ರದ್ಧೆಯುಳ್ಳವನಿಗೆ ಜ್ಞಾನ ಲಭಿಸುವುದು.

ಶ್ರೀಮಾತೆ ಶ್ರದ್ಧೆಯ ಪ್ರತೀಕವಾಗಿದ್ದರು. ಒಂದು ದಿನ ಕಸವನ್ನು ಗುಡಿಸಿದ ನಂತರ ಪೊರಕೆಯನ್ನು ಒಂದು ಮೂಲೆಗೆ ಬೀಸಿ ಎಸೆದುದನ್ನು ನೋಡಿ, "ಏನಿದು? ಕೆಲಸ ಮುಗಿದ ನಂತರ ಅದನ್ನು ಅಷ್ಟು ಅಸಡ್ಡೆಯಿಂದ ಬಿಸಾಡುವುದೇ? ಎಸೆಯುವುದಕ್ಕೆ ಎಷ್ಟು ಸಮಯ ಬೇಕೋ, ಶ್ರದ್ಧೆಯಿಂದ ಸರಿಯಾಗಿ ಇಡಲೂ ಅಷ್ಟೇ ಸಮಯ ಸಾಕಾಗುವುದು. ಯಾವ ಸಣ್ಣ ಕೆಲಸದಲ್ಲೂ ತುಚ್ಛ ಭಾವವಿರಬಾರದು. ಆ ಪೊರಕೆಯು ಮತ್ತೆ ಬೇಕಾಗುವುದಿಲ್ಲವೇ? ಅದಿಲ್ಲದೆ ಶುಚಿಮಾಡಲಾಗುವುದಿಲ್ಲ. ಮನೆಯಲ್ಲಿನ ವಸ್ತುವದು. ಅದಕ್ಕೂ ಒಂದು ಸ್ಥಾನವಿರುವುದು. ಯಾವುದೇ ಕೆಲಸ ಮಾಡಿದರೂ ಶ್ರದ್ಧೆಯಿಂದ ಮಾಡಬೇಕು"ಎಂದು ಅವಿಸ್ಮರಣೀಯವಾದ ಶಿಕ್ಷಣ ನೀಡಿದರು.

**ಯಾ ದೇವೀ ಸರ್ವಭೂತೇಷು**
**ಕಾಂತಿರೂಪೇಣ ಸಂಸ್ಥಿತಾ :**

ಕಾಂತಿ ಎಂದರೆ ಶೋಭೆ, ಸೌಂದರ್ಯ, ದೀಪ್ತಿ, ಪ್ರಭೆ. ಚಂಡಿಯಲ್ಲಿ **ಸೌಮ್ಯಾ ಸೌಮ್ಯತರಾಽಶೇಷ ಸೌಮ್ಯೇಭ್ಯಸ್ತ್ವತಿ ಸುಂದರೀ** "ದೇವಿಯು, ದೇವಗಣಗಳಿಗೆ ಸೌಮ್ಯಳಾಗಿಯೂ, ದೈತ್ಯಗಣಗಳಿಗೆ ಅತ್ಯಂತ ರುದ್ರರೂಪಳಾಗಿಯೂ, ಮತ್ತು ಸಕಲ ಸುಂದರ ವಸ್ತುಗಳಲ್ಲಿ ಅತ್ಯಂತ ಸುಂದರಿಯಾಗಿಯೂ ಇರುವಳು" ಎಂದು ವರ್ಣಿಸಲ್ಪಟ್ಟಿರುವುದು. ವಸ್ತುಗಳಲ್ಲಿ ಹಾಗೂ ವ್ಯಕ್ತಿಗಳಲ್ಲಿರುವ ಸೌಂದರ್ಯದ ಪ್ರತೀಕವೇ ಕಾಂತಿ. ಅದು ಚೈತನ್ಯದ ಅಭಿವ್ಯಕ್ತಿಯಿಂದ ಬರುವಂತಹುದು. ಶ್ರೀಮಾತೆಯ ಅಂತರಂಗಶಿಷ್ಯರಾದ ಸ್ವಾಮಿ ಶಾರದೇಶಾನಂದರು, ಶ್ರೀಶಾರದಾ ದೇವಿಯವರ ಕಾಂತಿಯ ವರ್ಣನೆಯನ್ನು ಹೀಗೆ ಮಾಡಿರುವರು – "ಶ್ರೀಮಾತೆಯವರ ಹಸ್ತಗಳು ರಕ್ತವರ್ಣದಿಂದ ಕೂಡಿದ್ದವು. ಅವುಗಳನ್ನು ದರ್ಶಿಸುವ ಸೌಭಾಗ್ಯವು ಕೆಲವರಿಗೆ ಮಾತ್ರ ದೊರಕಿರುವುದು. ಪದತಲವೂ ಕೆಂಪಾಗಿ ಬೆಟ್ಟದಾವರೆಯಂತೆ ಶೋಭಿಸುತ್ತಿದ್ದವು. ತಲೆಯ ತುಂಬಾ ನೀಳವಾದ ಉಜ್ವಲ

ಕೃಷ್ಣವರ್ಣದಿಂದ ಕೂಡಿದ ಕೂದಲು ಸುರಳಿಸುರಳಿಯಾಗಿ ಹರಡಿರುತ್ತಿತ್ತು. ಅದು ಸುಂದರವಾದ ರೇಶಿಮೆಯ ನೂಲಿನಂತೆ ಅತಿ ನಯವಾಗಿ ಹೊಳಪಿನಿಂದ ಕಂಗೊಳಿಸುತ್ತಿತ್ತು. ಕೇಶದ ಅರ್ಧಭಾಗವು ವಕ್ಷಸ್ಥಲದಲ್ಲಿ ಇಳಿಬಿದ್ದಿರುತ್ತಿತ್ತು. ಸುಗಾಂಭೀರ್ಯದಿಂದ ಕೂಡಿದ ಮುಖದಲ್ಲಿ ಸುಲಕ್ಷಣವಾದ, ನೀಳವಾದ ಮೂಗು, ಸಾಸಿವೆಯ ಪುಷ್ಪದಂತೆ ಶೋಭಿಸುತ್ತಾ ಆಕರ್ಷಕವಾಗಿತ್ತು.. ಪ್ರಶಾಂತವೂ, ಸ್ಥಿರವೂ ಆದ ಆಕೆಯ ಕೃಪಾದೃಷ್ಟಿಯು ಸಕಲರ ಮೇಲೂ ಸರ್ವದಾ ಕಾರುಣ್ಯವನ್ನು ವರ್ಷಿಸುತ್ತಿತ್ತು. ಅವರ ವಿಶಾಲವೂ ಉಜ್ವಲವೂ ಆದ ಹಣೆಯಿಂದ ಕೂಡಿದ ಪ್ರಸನ್ನ ವದನಮಂಡಲವನ್ನು ನೋಡಿದವರ ಚಿತ್ತವು ಶಾಂತಿ ಆನಂದಗಳಿಂದ ತುಂಬಿ ಹೋಗುತ್ತಿತ್ತು. ಕಾಯವು ಶ್ಯಾಮಮಿಶ್ರಿತ ಉಜ್ವಲ ಗೌರ ವರ್ಣವಾಗಿತ್ತು. ಕಾಲಕ್ರಮದಲ್ಲಿ 'ಕಾಲಾ ಅಜ್ಞಾರ್' ಜ್ವರದಿಂದ ಅದು ಮಂಕಾಯಿತು. ಅವರು ದೀರ್ಘವಾದ ಅವಯವಗಳಿಂದ ಕೂಡಿದವರಾಗಿದ್ದರು. ಹಸ್ತ ಮತ್ತು ಪಾದಯುಗಳಗಳು ಅಸ್ವಾಭಾವಿಕವಾಗಿ ದೀರ್ಘವಾಗಿದ್ದವು. ಮಾತೆಯವರು ಮಂದಗತಿಯಲ್ಲಿ ಸ್ವಲ್ಪ ಎಡಭಾಗಕ್ಕೆ ವಾಲಿ ನಡೆಯುತ್ತಿದ್ದರು. ಭವಿಷ್ಯದಲ್ಲಿ ಅವರ ಮಂಡಿಗಳು ವಾತರೋಗಪೀಡಿತವಾದವು."

ಶ್ರೀಮಾತೆಯವರು ಕಾಶಿಯಲ್ಲಿ ವಾಸವಾಗಿದ್ದ ಸಮಯದಲ್ಲಿ ಓರ್ವ ಭಕ್ತ ಮಹಿಳೆಯು ಗೋಲಾಪ್‌ಮಾ ಅವರನ್ನು ಶಾರದಾದೇವಿಯೆಂದು ತಪ್ಪು ತಿಳಿದು ಅವರಿಗೆ ಪ್ರಣಾಮ ಮಾಡಲು ಹೋದಾಗ, ಗೋಲಾಪ್‌ಮಾ "ನೋಡು, ಅವರು ಮಾತಾ ಠಾಕೂರಿಣಿ" ಎಂದು ಶ್ರೀಮಾತೆಯವರ ಕಡೆ ತೋರಿದರು. ಅದರೆ ಮಾತೆಯವರು ತಮಾಷೆಯಿಂದ ನಕ್ಕು ಹೇಳಿದರು, "ಅಲ್ಲ, ಅಲ್ಲ, ಅವರೇ ಮಾತಾ ಠಾಕೂರಿಣಿ." ಆ ಮಹಿಳೆ ದಿಕ್ಕು ತೋರದೆ ಗೋಲಾಪ್‌ಮಾ ಕಡೆಗೆ ನೋಡಿದಾಗ ಗೋಪಾಲ್‌ಮಾ ಗದರಿಸಿ ಹೇಳಿದರು, "ನಿನಗೇನು ವಿವೇಚನಾ ಬುದ್ಧಿ ಇಲ್ಲವೇ? ಮನುಷ್ಯರ ಮುಖಕ್ಕೂ ಮತ್ತು ದೇವತೆಯ ಮುಖಕ್ಕೂ ಇರುವ ವ್ಯತ್ಯಾಸ ಕಾಣುವುದಿಲ್ಲವೇ? ಸಾಧಾರಣರ ಮುಖ ಈ ರೀತಿ ಇರುವುದೇನು?" ನಿಜ. ಮಾತೆಯವರ ಸರಳವೂ ಪ್ರಸನ್ನವೂ ಅದ ದೃಷ್ಟಿಯಲ್ಲಿ ಒಂದು ವೈಶಿಷ್ಟ್ಯವೇ ಇದ್ದಿತು. ಅವರೊಬ್ಬ ಅಸಾಧಾರಣ ವ್ಯಕ್ತಿ ಎಂಬುದು ಎಂತಹವರಿಗೂ ಮನವರಿಕೆಯಾಗುತ್ತಿತ್ತು.

## ಯಾ ದೇವೀ ಸರ್ವಭೂತೇಷು
## ಲಕ್ಷ್ಮೀರೂಪೇಣ ಸಂಸ್ಥಿತಾ :

ಲಕ್ಷ್ಮೀ ಎಂದರೆ ಶ್ರೀ, ಸಂಪತ್ತು, ವಿತ್ತ, ಅಭ್ಯುದಯ, ಸಮೃದ್ಧಿ, ಸೌಭಾಗ್ಯ, ಶೋಭೆ. ದೇವಿಯು ಪ್ರಾಣರೂಪಿಣಿಯಾದ ಲಕ್ಷ್ಮೀ. ಶ್ರೀರಾಮಕೃಷ್ಣರ ಜೀವಿತಕಾಲದಲ್ಲಿ, ಭಕ್ತ ಮಹಿಳೆಯೊಬ್ಬಳ ಟೀಕೆಯಿಂದ ನೊಂದು, ಶಾರದಾದೇವಿಯವರು ತಾವು ಧರಿಸಿದ್ದ ಆಭರಣಗಳನ್ನೆಲ್ಲ ತೆಗೆದಿದ್ದರು. ಇದನ್ನು ಕಂಡ ಗೌರಿಮಾ, "ನೀನು ವೈಕುಂಠದ ಲಕ್ಷ್ಮೀ, ನಿರಾಭರಣೆಯಾಗಿ ಇರಬಾರದು" ಎಂದು ಹೇಳಿ ಬಲವಂತದಿಂದ ಒಂದೆರಡು ಒಡವೆಗಳನ್ನು ತೊಡಿಸಿದರು. ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ, ಶ್ರೀಮಾತೆಯವರು ಲೋಕಾಪವಾದದಿಂದ ಪಾರಾಗಲು ಒಡವೆಗಳನ್ನು ಮತ್ತೆ ತೆಗೆದುಹಾಕಲು ತೊಡಗಿದಾಗ, "ಠಾಕೂರರು ನಿತ್ಯಸ್ಥಿತರು ಮತ್ತು ನೀನು ಸ್ವಯಂ ಲಕ್ಷ್ಮಿಯೇ ಆಗಿರುವುದರಿಂದ ವಿಧವೆಯಂತೆ ವೇಷ ಭೂಷಣಗಳನ್ನು ತ್ಯಜಿಸಿದರೆ ಲೋಕಕ್ಕೆ ಅಕಲ್ಯಾಣವಾಗುವುದು" ಎಂದು ಗೌರಿಮಾ ಅಡ್ಡಿಮಾಡಿದರು.

ಜಯರಾಂಬಾಟಿಯಲ್ಲಿರುವಾಗ ಶ್ರೀಮಾತೆಯವರು ಎಲ್ಲ ಹೆಂಗಸರಂತೆ ರೊಟ್ಟಿ ಲಟ್ಟಿಸುವುದನ್ನು ನೋಡಿದ ಭಕ್ತನು ಕೇಳಿದನು, "ತಾಯಿ, ಇದೆಲ್ಲಾ ಮಾಯೆ ಏನು?" ಅದಕ್ಕೆ ಮಾತೆ "ಮತ್ತೇನು? ಅಲ್ಲದಿದ್ದರೆ ನನಗೆ ಏಕೆ ಈ ಅವಸ್ಥೆ. ನಾನು ವೈಕುಂಠದಲ್ಲಿ ನಾರಾಯಣನ ಬದಿಯಲ್ಲಿ ಲಕ್ಷ್ಮಿಯಾಗಿ ಕುಳಿತಿರುತ್ತಿದ್ದೆ" ಎಂದರು.

## ಯಾ ದೇವೀ ಸರ್ವಭೂತೇಷು
## ವೃತ್ತಿರೂಪೇಣ ಸಂಸ್ಥಿತಾ :

ವೃತ್ತಿ ಎಂದರೆ ಸ್ಥಿತಿ, ವ್ಯಾಪಾರ, ಕ್ರಿಯಾ-ವ್ಯವಹಾರ, ಮನೋಭಾವ ಇತ್ಯಾದಿ. ಇಲ್ಲಿ ವೃತ್ತಿ ಶಬ್ದದ ಅರ್ಥ ಚಿತ್ತವೃತ್ತಿ. ಶ್ರೀಮಾತೆಯವರು ಶಿಕ್ಷಣ ಹಾಗೂ ಕಲಾ ಕೌಶಲಗಳನ್ನು ಬಹಳವಾಗಿ ಪ್ರೋತ್ಸಾಹಿಸುತ್ತಿದ್ದರು. ಒಮ್ಮೆ ಭಕ್ತೆಯೊಬ್ಬಳು "ಅಮ್ಮ, ನನಗೆ ಐವರು ಹೆಣ್ಣು ಮಕ್ಕಳಿರುವರು. ಯಾರಿಗೂ ವಿವಾಹವಾಗಿಲ್ಲ" ಎಂದು ಸಂಕಟಪಟ್ಟಾಗ, ಮಹಾಮಾತೆ "ಮದುವೆಯ ವಿಷಯದಲ್ಲಿ ಇಷ್ಟು ಚಿಂತೆ ಏಕೆ? ಅವರನ್ನು ನಿವೇದಿತಳ ಶಾಲೆಗೆ ಕಳುಹಿಸಿಕೊಡು. ಅಲ್ಲಿ ಅವರು ಓದು ಬರೆಹ ಕಲಿತು ಚೆನ್ನಾಗಿ ಬದುಕುವರು" ಎಂದು ಸಮಾಧಾನ ಹೇಳಿದರು. ಅವರು ಸ್ವತಃ ಕೈಕುಶಲತೆಯ ಕೆಲಸಗಳನ್ನು ಮಾಡುತ್ತಿದ್ದರು ಮತ್ತು ಇತರರು ಕಸೂತಿ, ಜಮಖಾನೆ, ಆಸನ ಮುಂತಾದವುಗಳನ್ನು ತಯಾರಿಸಿ ತಂದರೆ ಅವನ್ನು ಮತ್ತೆ ಮತ್ತೆ ಹೊಗಳಿ ಆನಂದಪಡುತ್ತಿದ್ದರು.

ಒಮ್ಮೆ ಭಕ್ತನೊಬ್ಬನು ತನ್ನ ಉದ್ಯೋಗದ ಜಾಗದಲ್ಲಿ ಸುಳ್ಳು ಹೇಳುವ ಸಂದರ್ಭಗಳು ಬರುವುದರಿಂದ ಉದ್ಯೋಗವನ್ನೇ ತ್ಯಜಿಸಬೇಕು ಎಂಬ ನಿರ್ಧಾರಕ್ಕೆ ಬಂದನು. ಆದರೆ ನಿರುದ್ಯೋಗಿಯಾದರೆ ಹೊಟ್ಟೆಪಾಡಿಗೆ ತೊಂದರೆಯಾಗುವುದು! ಕಿಂಕರ್ತವ್ಯವಿಮೂಢನಾಗಿ ಶ್ರೀಮಾತೆಯವರ ನಿರ್ದೇಶನಕ್ಕಾಗಿ ಪತ್ರ ಬರೆದನು. ಇದನ್ನು ಕೇಳಿದ ಮಾತೆಯವರು ಸ್ವಲ್ಪ ಹೊತ್ತು ಚಿಂತಿಸಿ ಅವನಿಗೆ ಕೆಲಸ ಬಿಡುವುದು ಬೇಡವೆಂದು ಉತ್ತರಿಸಲು ತಿಳಿಸಿದರು. ಇದನ್ನು ಕೇಳಿದ ಸೇವಕನು

ಆಶ್ಚರ್ಯಚಕಿತನಾಗಿ, ಅನ್ಯಾಯಮಾರ್ಗದಲ್ಲಿ ನಡೆಯಲು ಶ್ರೀಮಾತೆ ಉತ್ತೇಜಿಸುತ್ತಿದ್ದಾರೆಯೇ ಎಂದು ಭಾವಿಸಿ ಪತ್ರ ಬರೆಯಲು ಸಂಶಯಪಡುವುದನ್ನು ನೋಡಿ, ಶಾರದಾದೇವಿ, "ಈ ಹೊತ್ತು ಸಣ್ಣ ಸುಳ್ಳು ಹೇಳಲು ಹೆದರುತ್ತಿರುವವನು, ಚಾಕರಿ ಬಿಟ್ಟು ಅಭಾವದ ಪರಿಸ್ಥಿತಿ ಬಂದಾಗ ಕಳ್ಳತನ, ಡಕಾಯಿತಿ ಮಾಡಲೂ ಹೇಸುವುದಿಲ್ಲ" ಎಂದು ನಿಸ್ಸಂಶಯವಾಗಿ ನುಡಿದರು. ಇದನ್ನು ಕೇಳಿದ ಸೇವಕನು ಶ್ರೀಮಾತೆಯವರ ದೂರದೃಷ್ಟಿ ಹಾಗೂ ಆಪತ್ತಿನಿಂದ ರಕ್ಷಿಸುವ ಕಾಳಜಿಯನ್ನು ಕಂಡು ವಿಸ್ಮಿತನಾದನು.

### ಯಾ ದೇವೀ ಸರ್ವಭೂತೇಷು ಸ್ಮೃತಿರೂಪೇಣ ಸಂಸ್ಥಿತಾ :

ಸ್ಮೃತಿ ಎಂದರೆ ಸ್ಮರಣೆ, ಚಿಂತೆ, ಅನುಭವ, ಜ್ಞಾನ. ಛಾಂದೋಗ್ಯ ಉಪನಿಷತ್ತಿನಲ್ಲಿ "ಆಹಾರ ಶುದ್ಧಿಯಿಂದ ಸತ್ತ್ವ ಶುದ್ಧಿಯುಂಟಾಗುವುದು, ಸತ್ತ್ವಶುದ್ಧಿಯಾದಲ್ಲಿ ನಿಶ್ಚಲವಾದ ಸ್ಮೃತಿಯುಂಟಾಗುವುದು. ಸ್ಮೃತಿಯುಂಟಾಗುವುದರಿಂದ ಸಮಸ್ತ ಹೃದಯಗ್ರಂಥಿಗಳು ವಿನಷ್ಟವಾಗುವುವು" ಎಂದು ಹೇಳಿರುವುದು. ಚಂಡಿಯಲ್ಲಿ ಈ ರೀತಿ ವರ್ಣನೆ ಇದೆ: **ಮೇಧಾಽಸಿ ದೇವಿ ವಿದಿತಾಖಿಲ ಶಾಸ್ತ್ರಸಾರಾ** –"ಯಾರ ಕೃಪೆಯಿಂದ ಸರ್ವಶಾಸ್ತ್ರಗಳ ಮರ್ಮವು ತಿಳಿಯಲ್ಪಡುವುದೋ ಆ ಮೇಧಾರೂಪಿಣಿಯಾದ ದೇವಿ ಸರಸ್ವತಿ ನೀನು."

ಭಕ್ತರು ಹೃದಯದಲ್ಲಿ ಸದಾ ಭಗವತ್‌ಸ್ಮೃತಿಯನ್ನು ಜಾಗ್ರತವಾಗಿರಿಸುವಂತೆ ಶ್ರೀಶಾರದಾದೇವಿಯವರು ಪ್ರಬೋಧಿಸುತ್ತಿದ್ದರು. ಶ್ರೀಮಾತೆಯ ಮಹಾಸಮಾಧಿಯ ನಂತರವೂ ಅವರ ಪುಣ್ಯಸ್ಮೃತಿಯು ಅಗಣಿತ ಭಕ್ತರ ಹಾಗೂ ಸಂನ್ಯಾಸಿಗಳ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದೆ. ಅವುಗಳನ್ನು ಶ್ರೀಮಾತೆಯವರ ಜೀವನಚರಿತ್ರೆಯಾಗಿ, ಉಪದೇಶಗಳಾಗಿ ಗ್ರಂಥರೂಪದಲ್ಲಿ ಪ್ರಕಾಶಿಸಲಾಗಿದೆ. ಸ್ವಾಮಿ ಶಾರದಾನಂದರು 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ವೆಂಬ ಉತ್ಕೃಷ್ಟ ಗ್ರಂಥದಲ್ಲಿ ಹಲವಾರು ಸಂದರ್ಭಗಳಲ್ಲಿ ಶ್ರೀಮತೆಯ ಸ್ಮೃತಿಗಳನ್ನು ಅಳವಡಿಸಿರುವರು.

### ಯಾ ದೇವೀ ಸರ್ವ ಭೂತೇಷು ದಯಾರೂಪೇಣ ಸಂಸ್ಥಿತಾ:

ದಯಾ ಎಂದರೆ ಪರರ ದುಃಖವನ್ನು ಹೋಗಲಾಡಿಸುವ ಇಚ್ಛೆ, ಪರರು ನೀಡುವ ದುಃಖವನ್ನು ಸಹಿಸುವುದು, ಅನುಕಂಪೆ, ಕೃಪೆ, ಕರುಣೆ. ಪ್ರತಿ ಜೀವಿಯ ಹೃದಯದಲ್ಲಿಯೂ ಅಲ್ಪ ಅಥವಾ ಅಧಿಕ ಪ್ರಮಾಣದಲ್ಲಿ ದೇವಿಯ ಈ ದಯಾಭಾವನೆಯು ವ್ಯಕ್ತವಾಗಿರುವುದು ಕಂಡುಬರುತ್ತದೆ.

ಕರುಣಾರೂಪಿಣಿಯಾದ ಮಾತೆ ಹೇಳುತ್ತಿದ್ದರು, "ಭಕ್ತರು ಮಂತ್ರದೀಕ್ಷೆಗಾಗಿ ಬಂದು ಪೀಡಿಸುವರು. ಅವರು ಅಳುವುದನ್ನು ನೋಡಿ ನಾನು ದಯೆಯಿಂದ ಮಂತ್ರವನ್ನು ಕೊಟ್ಟು ಅನುಗ್ರಹಿಸುವೆನು. ಈ ಶರೀರವು ಹೇಗಿದ್ದರೂ ಒಂದು ದಿನ ಬಿದ್ದುಹೋಗುವುದು, ಅವರ ಉದ್ಧಾರವಾದರೂ ಆಗಲಿ." ಒಂದು ದಿನ ಪುಚ್ಚಿ ಅತ್ತೆ (ಸುರಬಾಲಾ) ಒಬ್ಬ ಹುಡುಗನಿಗೆ ಲೋಟದಲ್ಲಿ ನೀರನ್ನು ಕುಡಿಯಲು ತಂದಿಟ್ಟಾಗ, ಬೆಕ್ಕೊಂದು ಅದಕ್ಕೆ ಬಾಯಿಹಾಕಿತು. ಅವಳು ರೇಗಿ ಬೆಕ್ಕನ್ನು ತಡೆದಳು. ಇದನ್ನು ಕಂಡ ಶ್ರೀಮಾತೆ "ದಾಹದಿಂದ ಬಂದದ್ದನ್ನು ಹಾಗೆ ತಡೆಯಕೂಡದು. ಹೇಗಿದ್ದರೂ ಅದು ಎಂಜಲು ಮಾಡಿ ಆಗಿದೆ" ಎಂದು ಹೇಳಿದಾಗ, ಉದ್ರಿಕ್ತಳಾದ ಸುರಬಾಲಾ "ಓಹೋ, ನೀನು ಬೆಕ್ಕಿಗೆ ಅಷ್ಟು ದಯೆ ತೋರಬೇಕಿಲ್ಲ. ಅದನ್ನು ಮನುಷ್ಯರಿಗೆ ತೋರು" ಎಂದು ಕೂಗಿದಳು. ಶ್ರೀಮಾತೆಯವರು ಗಂಭೀರರಾಗಿ "ನನ್ನ ದಯೆ ಪಡೆಯದವನು ಹತಭಾಗ್ಯನೇ ಸರಿ. ನಾನು ದಯೆ ತೋರದವರಾರೂ ಇಲ್ಲ, ಒಂದು ಹುಳುವೂ ಸಹ" ಎಂದು ದೃಢರಾಗಿ ನುಡಿದರು.

### ಯಾ ದೇವೀ ಸರ್ವಭೂತೇಷು ತುಷ್ಟಿರೂಪೇಣ ಸಂಸ್ಥಿತಾ :

ತುಷ್ಟಿ ಎಂದರೆ ಸಂತೋಷ, ತೃಪ್ತಿ. **ತಸ್ಮಿನ್ ತುಷ್ಟೇ ಜಗತ್ ತುಷ್ಟಂ ಪ್ರೀಣಿತೇ ಪ್ರೀಣಿತಂ ಜಗತ್**: ಭಗವಂತನು ತೃಪ್ತನಾದರೆ ಎಲ್ಲವೂ—ಇಡೀ ಜಗತ್ತೇ—ತೃಪ್ತಿಯನ್ನು ಹೊಂದುತ್ತದೆ. ದೇವಿಯು ತುಷ್ಟಿರೂಪಿಣಿ. ಇಷ್ಟಪ್ರಾಪ್ತಿ ಹಾಗೂ ಅನಿಷ್ಟನಿವೃತ್ತಿಯಿಂದ ಕ್ಷಣ ಕಾಲಕ್ಕಾದರೂ ಅಂತರಂಗದಲ್ಲಿ ಯಾವ ತೃಪ್ತಿಯ ಭಾವವು ಉದಯವಾಗುವುದೋ, ಅದೇ ದೇವಿಯ ತುಷ್ಟಿಮೂರ್ತಿ. ಸಂಸಾರದಲ್ಲಿನ ರೋಗ, ಶೋಕ, ನೋವು, ಹಸಿವು, ತೃಷ್ಣೆಗಳು ತುಷ್ಟಿಯಿಂದ ನಿವಾರಣೆಯಾಗುವುವು. ಜೀವಿಗಳು ತುಷ್ಟಿಯನ್ನು ಹುಡುಕುತ್ತಾ ಅಲೆಯುತ್ತಿರುವರು. ಗೀತೆಯಲ್ಲಿ "ಯಾರು ಸದಾ ಸಂತುಷ್ಟರಾಗಿರುವರೋ, ಅವರೇ ಭಗವಂತನ ಶ್ರೇಷ್ಠ ಭಕ್ತರು" ಎಂದು ಹೇಳಿದೆ.

ಶ್ರೀಮಾತೆಯವರು ಹೇಳುತ್ತಿದ್ದುದುಂಟು: "ಸಂತುಷ್ಟಿಗೆ ಸಮಾನವಾದ ಧನವಿಲ್ಲ ಮತ್ತು ಸಹನೆಗೆ ಸಮಾನವಾದ ಗುಣವಿಲ್ಲ". ಅವರ ಮಾತಿನಿಂದಲೇ ಅವರ ಸಂತುಷ್ಟಿಯ ಬಗ್ಗೆ ತಿಳಿಯುವುದಾದರೆ, "ನಾನು ರಾಮೇಶ್ವರಕ್ಕೆ ಬಂದಿರುವೆನೆಂದು ತಿಳಿದು ರಾಮನಾಡಿನ ಮಹಾರಾಜನು, ಅರಮನೆಯ ಖಜಾನೆಯನ್ನು ತೋರಿಸಲು ಹಾಗೂ ಅಲ್ಲಿ ನನಗೆ ಏನಾದರೂ ಇಷ್ಟವಾದಲ್ಲಿ ತಕ್ಷಣ ನನಗೆ ಅದನ್ನು ಕಾಣಿಕೆಯಾಗಿ ನೀಡಬೇಕು ಎಂದು ತನ್ನ ದಿವಾನರಿಗೆ ಆಜ್ಞೆ ಮಾಡಿದನು. ನಾನೇನು ಹೇಳಲಿ? ಏನೂ ತೋಚದೆ, ನನಗೆ ಅಗತ್ಯವಾದ ಎಲ್ಲ ವ್ಯವಸ್ಥೆಯನ್ನೂ ಶಶಿ (ರಾಮಕೃಷ್ಣಾನಂದರು) ಮಾಡಿರುವನು ಎಂದೆ. ಮತ್ತೆ ಅವರ ಮನಸ್ಸಿಗೆ ನೋವಾಗಬಹುದು ಎಂದು ಎಣಿಸಿ, 'ರಾಧುವಿಗೆ ಏನಾದರೂ

'ಇಷ್ಟವಾದಲ್ಲಿ ತೆಗೆದುಕೊಳ್ಳಲಿ' ಎಂದೆ. ಆದರೆ ಅಲ್ಲಿನ ವಜ್ರ, ವೈಢೂರ್ಯಗಳನ್ನು ಮತ್ತು ಅತಿ ಬೆಲೆಬಾಳುವ ಸಾಮಗ್ರಿಗಳನ್ನು ನೋಡಿ ನನ್ನ ಎದೆ ಡವಡವನೆ ಬಡಿದುಕೊಳ್ಳಲಾರಂಭಿಸಿತು. ಠಾಕೂರರನ್ನು ವ್ಯಾಕುಲಳಾಗಿ ಪ್ರಾರ್ಥಿಸಿದೆ: 'ಠಾಕೂರ್, ರಾಧು ಯಾವುದರಿಂದಲೂ ಪ್ರಲೋಭಿತಳಾಗದಿರಲಿ' ಎಂದು. ನಂತರ ರಾಧು 'ಇದೊಂದೂ ನನಗೆ ಬೇಡ. ನನ್ನ ಪೆನ್ಸಿಲ್ ಕಳೆದುಹೋಗಿರುವುದು. ಅದನ್ನು ತೆಗೆದುಕೊಡು!' ಎಂದಳು. ನಾನು ನಿಶ್ಚಿಂತೆಯಿಂದ ಉಸಿರುಬಿಟ್ಟು, ಹೊರಗೆ ಬಂದಮೇಲೆ ಅಂಗಡಿಯಿಂದ ಎರಡು ಪೈಸೆಗೆ ಪೆನ್ಸಿಲನ್ನು ಕೊಂಡುಕೊಟ್ಟೆ."

### ಯಾ ದೇವೀ ಸರ್ವಭೂತೇಷು
### ಮಾತೃರೂಪೇಣ ಸಂಸ್ಥಿತಾ :

ಅವಳೇ ಸೃಷ್ಟಿ ಮಾಡುವವಳು, ಪಾಲನೆ ಮಾಡುವವಳು, ನಂತರ ತನ್ನ ಒಳಕ್ಕೇ ಎಲ್ಲ ಜೀವಿಗಳನ್ನೂ ಸೆಳೆದುಕೊಳ್ಳುವವಳು. ಇದು ಅವಳ ಲೀಲೆ. ಒಮ್ಮೆ ಸ್ವಾಮಿ ಅರೂಪಾನಂದರು ಮಾತೆಯವರನ್ನು ಕೇಳಿದರು, "ನೀವು ಸಕಲರಿಗೂ ತಾಯಿ ಏನು?" ಶ್ರೀಮಾತೆ, "ಹೌದು. ಎಲ್ಲರಿಗೂ" ಎಂದರು. ಸ್ವತಃ ಅವರೇ ಘೋಷಿಸಿರುವರು, "ನಾನು ತಾಯಿ, ಈ ಜಗತ್ತಿಗೇ ತಾಯಿ." ಒಂದು ಕರುವಿನ ಅಂಬಾ ಎನ್ನುವ ಕೂಗು ಕೇಳಿದರೂ ಕಾತರದಿಂದ ಹೇಳುತ್ತಿದ್ದರು, "ಬಂದೆ, ಬಂದೆ ಮಗು, ಈಗ ನಿನ್ನನ್ನು ಕಟ್ಟಿರುವ ಹಗ್ಗದಿಂದ ಬಿಡಿಸುವೆನು" ಎಂದು. ಮನೆಯಲ್ಲಿ ಗಂಗಾರಾಂ ಎನ್ನುವ ಮೈನಾ ಹಕ್ಕಿ (ಗಿಳಿ?)ಯಿತ್ತು ಅದಕ್ಕೆ ಸ್ನಾನ ಮಾಡಿಸುವುದು, ತಿನ್ನಿಸುವುದು, ಮಾತು ಕಲಿಸುವುದು ಎಲ್ಲಾ ತಾವೇ ಸ್ವತಃ ಮಾಡುತ್ತಿದ್ದರು. ಆ ಗಿಳಿ ಆಗಾಗ "ಮಾ-ಮಾ" ಎಂದು ಕೂಗುತ್ತಿತ್ತು. ಅವರು ಅದಕ್ಕೆ ತಿನ್ನಲು ಕಡಲೆ, ನೀರನ್ನು ತೆಗೆದುಕೊಂಡು "ಬಂದೆ ಮಗು, ಬಂದೆ" ಎಂದು ಹೇಳುತ್ತ ಅದರ ಬಳಿಗೆ ಹೋಗುತ್ತಿದ್ದರು.

ಸ್ನೇಹಮಯಿ ಮಾತೆಯು "ನಾನು ಸಜ್ಜನರಿಗೆ ಮಾತ್ರವಲ್ಲ, ದುರ್ಜನರಿಗೂ ತಾಯಿ; ವಿದೇಶೀಯರೂ ಸಹಾ ನನ್ನ ಸ್ವಂತ ಮಕ್ಕಳೇ. ಸಕಲರ ಮಂಗಳಕ್ಕಾಗಿ ನಾನು ಠಾಕೂರರ ಬಳಿ ಸದಾ ಪ್ರಾರ್ಥಿಸುವೆನು" ಎನ್ನುತ್ತಿದ್ದರು. ಒಮ್ಮೆ ಗಿರೀಶ್ ಬಾಬು ಶ್ರೀಮಾತೆಯನ್ನು ಪ್ರಶ್ನಿಸಿದರು, "ನೀವು ಯಾವ ತರಹದ ತಾಯಿ?" ತಕ್ಷಣ ಅದಕ್ಕುತ್ತರವಾಗಿ ಹೇಳಿದರು, "ನಾನು ನಿನ್ನ ನಿಜವಾದ ತಾಯಿ, ಗುರುಪತ್ನಿಯಲ್ಲ, ಸಾಕುತಾಯಿಯೂ (ಸ್ವೀಕರಿಸಿದ) ಅಲ್ಲ, ಅಸ್ಪಷ್ಟ ಅರ್ಥದಲ್ಲಿಯೂ ಅಲ್ಲ. ನಾನು ನಿನ್ನ ನಿಜವಾದ ಜನನಿ." ಪ್ರಫುಲ್ಲಚಂದ್ರ ಘೋಷರಿಗೆ ಒಮ್ಮೆ ಹೇಳಿದರು, "ಯಾವಾಗ ಜೀವನದಲ್ಲಿ ದುಃಖ, ಕಷ್ಟ, ಆಘಾತಗಳು ಬರುವುವೋ, ವಿಫಲತೆಗಳು ಉಂಟಾಗುವುವೋ, ಆಗ ನಿಶ್ಚಯವಾಗಿ ತಿಳಿ, ನಾನು ನಿನ್ನ ಸಂಗಡ ಇರುವೆನೆಂದು. ಭಯಪಡದಿರು, ಹತಾಶನಾಗದಿರು. ಮಗು, ನಾನಿರುವಾಗ ನಿನಗೆ ಏತರ ಭಯ? ನಾನು ನಿಮ್ಮೆಲ್ಲರ ತಾಯಿ, ಸ್ವಂತ ತಾಯಿ. ನನ್ನ ಸಂತಾನಗಳನ್ನು ನಾಶಮಾಡಲು ವಿಧಾತನಿಗೂ ಅಸಾಧ್ಯ ಎನ್ನುವುದನ್ನು ನಂಬು. ನನ್ನ ಮೇಲೆ ಭಾರ ಹಾಕಿ ನಿಶ್ಚಿಂತೆಯಿಂದ ಇರು. ನಾನು ನಿಮ್ಮ ಇಹಪರಗಳೆರಡರಲ್ಲೂ ತಾಯಿ. ನಿಮ್ಮ ಜನ್ಮಜನ್ಮಾಂತರದ ತಾಯಿ. ಇನ್ನು ನಿನಗೆ ಭಯವೇಕೆ?" ಶ್ರೀಮಾತೆ ಈ ಮೂಲಕ ಸಕಲರಿಗೂ ಚಿರ ಆಶ್ವಾಸನೆಯನ್ನು ನೀಡಿರುವರು.

### ಯಾ ದೇವೀ ಸರ್ವಭೂತೇಷು
### ಭ್ರಾಂತಿರೂಪೇಣ ಸಂಸ್ಥಿತಾ :

ಭ್ರಾಂತಿ ಎಂದರೆ ಭ್ರಮೆ, ಯಾವುದು ಇಲ್ಲವೋ ಅದನ್ನೇ ತಪ್ಪು ತಿಳಿವಳಿಕೆಯಿಂದ ಕಾಣುವುದು. ವೇದಾಂತದಲ್ಲಿ ಮತ್ತೆ ಮತ್ತೆ ಅಸತ್ ಮತ್ತು ಮಿಥ್ಯೆ ಎಂಬ ಪದಗಳು ಉಪಯೋಗಿಸಲ್ಪಟ್ಟಿರುವುವು. ಅಸತ್ ಎಂದರೆ ಯಾವುದು ಇಲ್ಲವೋ ಮತ್ತು ನೋಡಲಾಗುವುದಿಲ್ಲವೋ ಅದು.'ಆಕಾಶಕುಸುಮ'ದ ಹಾಗೆ. ಮಿಥ್ಯೆ ಎಂದರೆ ನಿಜವಾಗಿ ಯಾವುದು ಇಲ್ಲದಿದ್ದರೂ ಕಾಣಲ್ಪಡುವುದೋ ಅದು. 'ಮರೀಚಿಕೆ'ಯ ಹಾಗೆ. ಈ ಜಗತ್ತು ಮರೀಚಿಕೆಯಂತೆ.

ಬ್ರಹ್ಮರೂಪಿಣಿಯಾದ ಶಾರದಾದೇವಿಯವರು, ಸಗುಣ ಹಾಗೂ ಸಾಕಾರರೂಪವನ್ನು ಧರಿಸಿ ಲೀಲೆಯನ್ನು ನಡೆಸಿ ಹೋಗಿರುವರು. 'ಭ್ರಾಂತಿ'ಯ ರೂಪವು ಇಲ್ಲದಿದ್ದರೆ ಜಗತ್ತಿನಲ್ಲಿ ಆಟ (ಲೀಲೆ) ನಡೆಯಲು ಸಾಧ್ಯವಿಲ್ಲ. ಆದರೆ ಯಾವಾಗ ಜೀವಿಯು ಜಗದೀಶ್ವರಿಯಲ್ಲಿ ಸಂಪೂರ್ಣ ಶರಣಾಗುವನೋ ಆಗ ಅವನ 'ಭ್ರಾಂತಿಜ್ಞಾನ'ವನ್ನು ಸರಿಸಿ ಆತ್ಮಸ್ವರೂಪವನ್ನು ತಾಯಿ ತೋರಿಸಿಕೊಡುವಳು.

### ಇಂದ್ರಿಯಾಣಾಂ ಅಧಿಷ್ಠಾತ್ರೀ
### ಭೂತಾನಾಂ ಚಾಖಿಲೇಷು ಯಾ :

ಬ್ರಹ್ಮಶಕ್ತಿಸ್ವರೂಪಿಣಿಯಾದ ದೇವಿಯು ಸಕಲ ಪ್ರಾಣಿಗಳ ಚತುರ್ದಶ ಇಂದ್ರಿಯಗಳ ಅಧಿಷ್ಠಾತ್ರೀ. ಪಂಚಭೂತಗಳನ್ನು ಪ್ರೇರೇಪಿಸುವವಳು ಅವಳೇ. ಇದೇ ದೇವಿಯ ವ್ಯಾಪ್ತಿಮೂರ್ತಿ. ಒಮ್ಮೆ ಶಾರದಾದೇವಿಯವರು ಒಬ್ಬ ಭಕ್ತನನ್ನುದ್ದೇಶಿಸಿ ಹೇಳಿದರು, "ಜಪತಪಗಳ ಆವಶ್ಯಕತೆ ಏಕೆ ಗೊತ್ತೇನು? ಅದರ ಫಲದಿಂದ ಇಂದ್ರಿಯಗಳ ಪ್ರಲೋಭನೆಗಳು ನಾಶವಾಗುವುದಕ್ಕಾಗಿ." ಶ್ರೀಮಾತೆಯವರ ಶಿಷ್ಯರೊಬ್ಬರು "ತಾಯಿ, ನನ್ನ ಮನಸ್ಸಿನಲ್ಲಿ ಕೆಟ್ಟ ಚಿಂತೆಗಳು ಬರುವುದೇ ಇಲ್ಲ" ಎಂದು ಹೇಳಿದಾಗ, ಮಾತೆಯವರು ಬೆಚ್ಚಿ ತಕ್ಷಣ ನುಡಿದರು, "ಕೂಡದು, ಹಾಗೆ ಹೇಳಕೂಡದು" ಎಂದು ಎಚ್ಚರಿಕೆ ನೀಡಿದರು.

ಭಕ್ತನೊಬ್ಬನು ಶ್ರೀಮಾತೆಯ ಬಳಿ "ತಾಯಿ, ನನ್ನ ಮನಸ್ಸಿಗೆ ಶಾಂತಿ ಇಲ್ಲ. ಚಿತ್ತವು ಸದಾ ಚಂಚಲವಾಗಿರುವುದು, ಕಾಮ ವಾಸನೆಯೂ ಹೋಗಿಲ್ಲ" ಎಂದು ನೊಂದು ನುಡಿದಾಗ, ಮಾತೆಯವರು ಅವನ ಮುಖವನ್ನೇ ತದೇಕ ದೃಷ್ಟಿಯಿಂದ ಸ್ವಲ್ಪ ಹೊತ್ತು ವೀಕ್ಷಿಸಿದರು. ಆದರೆ ಒಂದು ಶಬ್ದವನ್ನೂ ಸಹ ಹೇಳಲಿಲ್ಲ. ಇದರಿಂದ ಅನುತಾಪವಾಗಿ, ಆತ ಅವರಿಗೆ ನಮಸ್ಕರಿಸಿ, ಮಾಸ್ಟರ್ ಮಹಾಶಯರನ್ನು ಭೇಟಿ ಮಾಡಲು ಹೋದ. ಅಲ್ಲಿ ಅವರಿಗೆ "ನೀವು ಠಾಕೂರರ ಅನೇಕ ಸೇವೆಗಳನ್ನು ಮಾಡಿರುವಿರಿ. ಆ ನಿಮ್ಮ ಹಸ್ತದಿಂದ, ನನ್ನ ಈ ಬಿಸಿಯಾದ ತಲೆಯನ್ನು ಸ್ಪರ್ಶಿಸಿ" ಎಂದು ಬೇಡಿದ. ಆಗ ಅವರು, ಆಶ್ಚರ್ಯದಿಂದ "ಇದೇನಿದು? ನೀವು ಶ್ರೀಮಾತೆಯವರ ಸಂತಾನ (ಶಿಷ್ಯ). ಅಲ್ಲದೆ, ಅವರು ನಿನ್ನನ್ನು ಬಹಳವಾಗಿ ಪ್ರೀತಿಸುವರು. ಮಾತೆಯವರ ಕೃಪಾದೃಷ್ಟಿ ನಿಮ್ಮ ಮೇಲೆ ಬೀಳಲಿಲ್ಲವೇ?" ಎಂದು ಕೇಳಿದರು. "ಹೌದು, ಬಹಳ ಹೊತ್ತು ನನ್ನನ್ನೇ ಎವೆಯಿಕ್ಕದೆ ನೋಡಿದರು" ಎಂಬುದನ್ನು ಕೇಳಿದಾಗ, ಮಾಸ್ಟರ್ "ಹಾಗಿದ್ದಲ್ಲಿ ಮತ್ತಿನ್ನೇನು? ಶ್ಯಾಮೆ ಏನಾದರೂ ಒಮ್ಮೆ ತಿರುಗಿ ನೋಡಿದಲ್ಲಿ ನೀನು ಸದಾನಂದದಲ್ಲಿ ತೇಲಿ ಹೋಗುವೆ" ಎಂದು ಆಶ್ವಾಸನೆ ನೀಡಿದರು (ಬಂಗಾಳಿಯ ಒಂದು ಹಾಡಿನ ಅರ್ಥ). ಇಂದ್ರಿಯಗಳ ಅಧಿಷ್ಠಾತ್ರಿಯಾದ ಶ್ರೀಮಾತೆಯವರ ಕೃಪಾದೃಷ್ಟಿಯಿಂದ ಆ ಭಕ್ತನ ಕಾಮಾಗ್ನಿಯು ಸಂಪೂರ್ಣವಾಗಿ ನಾಶವಾಯಿತು.

**ಚಿತಿರೂಪೇಣ ಯಾ ಕೃತ್ಸ್ನಮ್**
**ಏತದ್ವ್ಯಾಪ್ಯ ಸ್ಥಿತಾ ಜಗತ್**

ದೇವಿಯು ಚಿತ್‌ಶಕ್ತಿಸ್ವರೂಪಿಣಿಯಾಗಿ ಈ ಸಮಸ್ತ ಜಗತ್ತನ್ನು ವ್ಯಾಪಿಸಿ, ನಡೆಸುತ್ತಿರುವಳು. ಪ್ರಾರಂಭದ (ಮೇಲಿನ) ಎರಡನೇ ಶ್ಲೋಕದಲ್ಲಿ ದೇವಿಯ ಚೇತನಾರೂಪಕ್ಕೆ ಪ್ರಣಾಮ ಮಾಡಲಾಗಿರುವುದು. ಅದು ವಿಶಿಷ್ಟವಾದ ಚೇತನ, ಅರ್ಥಾತ್ ಇಂದ್ರಿಯಾದಿಗಳ ಮೂಲಕ ಯಾವ ಚೈತನ್ಯವು ವ್ಯಕ್ತವಾಗುವುದೋ ಅದು. ಈ ಮಂತ್ರದಲ್ಲಿ ನಿರ್ಗುಣ ಚೈತನ್ಯವನ್ನು ಉದ್ದೇಶಿಸಿ, 'ಚಿತಿ' ಎಂಬ ಶಬ್ದವನ್ನು ಉಪಯೋಗಿಸಲಾಗಿದೆ. ನೀರು ಹೇಗೆ ಮಂಜಿನ ಗಡ್ಡೆಯಾಗುವುದೋ, ಅದೇ ರೀತಿಯಲ್ಲಿ ಸರ್ವವ್ಯಾಪಿಯಾದ ಚಿತ್‌ಶಕ್ತಿಯು ಘನೀಭೂತವಾಗಿ ಅವತಾರ ಅಥವಾ ಜಗದಂಬೆಯ ರೂಪ ಧರಿಸುವುದು. ಚಂಡೀದೇವಿಯು ದೇವಗಣಗಳ ಶಕ್ತಿಯ ಸಮಷ್ಟಿ ರೂಪ ಎಂದು 'ಚಂಡಿ'ಯಲ್ಲಿ (ದುರ್ಗಾಸಪ್ತಶತೀ) ಹೇಳಿರು ವುದು. ಅಸುರರ ನಾಶಕ್ಕಾಗಿ ದೇವತೆಗಳು ಸ್ವಂತ ವ್ಯಕ್ತಿತ್ವದ ಅಭಿಮಾನವನ್ನು ತ್ಯಜಿಸಿ ಒಂದಾಗಿದ್ದರು ಎಂದು ಇದರ ಅರ್ಥ.

ದೇವಿಯ ಕೃಪೆಯಿಂದ ಜ್ಞಾನಚಕ್ಷು ತೆರೆದರೆ ಜಗದಂಬೆಯ ವಿಶ್ವರೂಪದರ್ಶನವಾಗುವುದು. ಅದ್ವೈತಜ್ಞಾನದಲ್ಲಿ ಸುಪ್ರತಿಷ್ಠರಾದ ಶ್ರೀಮಾತೆ ಬಳಿಯಲ್ಲಿದ್ದವರಿಗೆ ಹೇಳಿದ್ದರು, "ಸಾಧನೆ ಮಾಡುತ್ತಾ ನೋಡುವೆ. ನನ್ನಲ್ಲಿ ಯಾರಿರುವನೋ ಅವನೇ ನಿನ್ನಲ್ಲಿಯೂ, ಪ್ರತಿ ಧೂಳಿನ ಕಣದಲ್ಲಿಯೂ, ಹುಲಿ ಮುಂತಾದ ದುಷ್ಟ ಮೃಗಗಳಲ್ಲಿಯೂ ಇರುವನೆಂದು."

ಶ್ರೀಮಾತೆಯವರನ್ನು ನಾನಾ ರೂಪಗಳಲ್ಲಿ ದರ್ಶಿಸಲು ಯಾರಿಗೆ ತಾನೇ ಇಚ್ಛೆ ಇರುವುದಿಲ್ಲ? ಶ್ರೀರಾಮಕೃಷ್ಣರು ಕಾಳೀ ದೇವಿಯ ದರ್ಶನದ ಅನಂತರವೂ ದೇವಿಯ ರೂಪವನ್ನು ಅನೇಕ ವಿಧಗಳಲ್ಲಿ ದರ್ಶಿಸಲು ಇಚ್ಛಿಸಿದರು. ಅವರು ಹೇಳುತ್ತಿದ್ದ ಹಾಗೆ "ಸಮುದ್ರ ತೀರದಲ್ಲಿ ವಾಸಿಸುವವನಿಗೆ ಸಮುದ್ರದೊಳಗಡೆ ಎಂತೆಂತಹ ರತ್ನಗಳಿರುವುವೋ ಅವುಗಳನ್ನೆಲ್ಲಾ ನೋಡಬೇಕು ಎಂದು ಆಗಾಗ ಮನಸ್ಸಿನಲ್ಲಿ ಆಸೆಯಾಗುವುದು. ಹಾಗೆಯೇ ನನಗೂ ದೇವಿಯ ದರ್ಶನವಾಗಿದ್ದರೂ, ಸದಾ ಅವಳ ಸಾನ್ನಿಧ್ಯವನ್ನು ಅನುಭವಿಸುತ್ತಿದ್ದರೂ ಆಗಾಗ ಅನ್ನಿಸುತ್ತಿತ್ತು, ಆನಂದಮಯಿಯೂ, ಅನಂತರೂಪಿಣಿಯೂ ಆದ ದೇವಿಯನ್ನು ನಾನಾ ಭಾವಗಳಲ್ಲಿ ನೋಡಬೇಕು ಎಂದು."

'ಚಂಡಿ'ಯಲ್ಲಿ ದೇವಗಣಗಳ ಸ್ತುತಿಯಿಂದ ಸಂತುಷ್ಟಳಾದ ದೇವಿಯು ಶುಂಭ-ನಿಶುಂಭರೆಂಬ ಅಸುರರನ್ನು ವಧೆ ಮಾಡಿದಳು. ಅನಂತರ ದೇವತೆಗಳು ವಿಪತ್ತಿನಿಂದ ಪಾರಾಗಿ ಪುನಃ ದೇವಿಯನ್ನು ಉದ್ದೇಶಿಸಿ ಹೃದಯಂಗಮ ಪ್ರಾರ್ಥನೆಯನ್ನು ಸಲ್ಲಿಸಿದರು— "ಹೇ ಭಕ್ತದುಃಖಹಾರಿಣಿಯಾದ ದೇವಿ, ನೀನು ಪ್ರಸನ್ನಳಾಗು. ಹೇ ನಿಖಿಲ ವಿಶ್ವಜನನಿ ನೀನು ಪ್ರಸನ್ನಳಾಗು, ಹೇ ವಿಶ್ವೇಶ್ವರಿ, ನೀನು ಪ್ರಸನ್ನಳಾಗಿ ಈ ಜಗತ್ತನ್ನು ಪಾಲಿಸು. ಹೇ ದೇವಿ, ನೀನು ಚರಾಚರ ಜಗತ್ತಿನ ಅಧೀಶ್ವರಿ."

ದೇವತೆಗಳಂತೆ ನಾವೂ ಸಹ ಶ್ರೀಮಾತೆ ಶಾರದಾದೇವಿಗೆ ಪ್ರಣಾಮ ಸಲ್ಲಿಸಿ, ಪ್ರಾರ್ಥನೆಯಿಂದ ನಮ್ಮ ಈ ಲೇಖನವನ್ನು ನಿವೇದಿಸೋಣ: "ಹೇ ಜನನಿ, ಪುನಃ ಪುನಃ ತಪ್ಪುಗಳನ್ನೇ ಮಾಡುವ ಮನಸ್ಸು ನಮ್ಮದು. ಚಿತ್ತವು ಚಂಚಲವಾಗಿರುವುದು. ಬುದ್ಧಿಯು ಅಹಂಕಾರದಿಂದ ತುಂಬಿರುವುದು. ನಮ್ಮನ್ನು ಉತ್ತಮ ಮನುಷ್ಯರನ್ನಾಗಿ ಪರಿವರ್ತಿಸಿ, ಉದ್ಧರಿಸು. ನಿನ್ನವರನ್ನಾಗಿ ಮಾಡಿಕೋ. ನಾವು ಸರ್ವಗುಣಹೀನರಾದುದರಿಂದ ನಿನ್ನ ಬಳಿ ಯಾಚಿಸುವುದಕ್ಕಾಗಿ ನಮಲ್ಲಿ ಹಲವಾರು ಬೇಡಿಕೆಗಳು ಇರುವುವು. ಅಮ್ಮಾ, ನಮಗೆ ವೀರ್ಯ, ಶೌರ್ಯಗಳನ್ನು ಕರುಣಿಸಿ ಅನುಗ್ರಹಿಸು. ಜ್ಞಾನ, ವಿವೇಕ, ವೈರಾಗ್ಯಗಳನ್ನು ದಯಪಾಲಿಸು. ಸಂಯಮ ಮತ್ತು ತಪಶ್ಚರ್ಯಗಳನ್ನು ನೀಡು ಹಾಗೂ ನಮ್ಮನ್ನು ಕಾರ್ಯತತ್ಪರರನ್ನಾಗಿಸು. ನಾವು ಈ ವಿಶ್ವದಲ್ಲಿ ತಲೆಯೆತ್ತಿ ನಿಲ್ಲುವಂತೆ ಮಾಡು."